International Journal of Kannada Research 2018; 4(4): 93-95




International Journal of Kannada Research
www.kannadajournal.com

**ISSN: 2454–5813**
IJKR 2018; 4(4): 93-95
© 2018 IJKR
www.kannadajournal.com
Received: 20-08-2018
Accepted: 21-09-2018

**ಶ್ರೀ ರಾಜಶೇಖರ ಬಿರಾದಾರ ಬೋನ್ಹಾಳ.**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು
ಯರಗಟ್ಟಿ, ತಾ.ಸವದತ್ತಿ ಜಿ.ಬೆಳಗಾವಿ
– ೫೯೧೧೨೯

**Correspondence**
**ಶ್ರೀ ರಾಜಶೇಖರ ಬಿರಾದಾರ ಬೋನ್ಹಾಳ.**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು
ಯರಗಟ್ಟಿ, ತಾ.ಸವದತ್ತಿ ಜಿ.ಬೆಳಗಾವಿ
– ೫೯೧೧೨೯

# ರವೀಂದ್ರನಾಥ ಠಾಕೂರರ ಕಾದಂಬರಿಗಳಲ್ಲಿ ರಾಷ್ಟ್ರೀಯತೆ

**ಶ್ರೀ ರಾಜಶೇಖರ ಬಿರಾದಾರ ಬೋನ್ಹಾಳ.**

ಭಾರತದ ಸ್ವಾತಂತ್ರ್ಯ ಹೋರಾಟದ ಕಾವು ತೀವ್ರವಾಗಿದ್ದ ಕಾಲದಲ್ಲಿಯೇ ರವೀಂದ್ರನಾಥ ಠಾಕೂರರು ಸಾಹಿತ್ಯ ರಚನೆ, ಅಧ್ಯಾತ್ಮ ಸಾಧನೆ, ಶೈಕ್ಷಣಿಕ ಪ್ರಯೋಗಗಳಲ್ಲಿ ತೊಡಗಿದ್ದರು. ಆದರೂ ರಾಷ್ಟ್ರೀಯತೆ, ಸ್ವಾತಂತ್ರ್ಯ ಚಳವಳಿಯ ಬಗ್ಗೆ ಸಮಕಾಲೀನರಿಗಿಂತ ಭಿನ್ನ ಆಲೋಚನೆಗಳನ್ನು ಅವರು ಹೊಂದಿದ್ದರು. ಹಿಂಸಾ ಮಾರ್ಗದ ರಾಷ್ಟ್ರೀಯ ಏಕತೆಗಿಂತಲೂ, “ಅಹಿಂಸಾ ಮಾರ್ಗದ ‘ವಿಶ್ವ ಭ್ರಾತೃತ್ವ’ ಹಾಗೂ ‘ಸಾಮರಸ್ಯ’ ಸಾಧಿಸುವುದು” ಅವರ ಗುರಿಯಾಗಿತ್ತು. ಠಾಕೂರರು ‘ಮಾನವತಾವಾದ’ದಲ್ಲಿ ಅಪಾರ ನಂಬಿಕೆಯನ್ನು ಹೊಂದಿದ್ದರು. ‘ಉದಾತ್ತವಾದ ಸಾಧನೆಯು ಉದಾತ್ತವಾದ ಮಾರ್ಗದಲ್ಲಿಯೇ ಬರಬೇಕು’ ಎಂಬ ಮಾತಿನಲ್ಲಿ ಅಪಾರ ವಿಶ್ವಾಸವನ್ನಿರಿಸಿಕೊಂಡಿದ್ದರು. ಆದ್ದರಿಂದ ಸ್ವಾತಂತ್ರ್ಯ ಹೋರಾಟ, ವಿಶ್ವಯುದ್ಧಗಳ ಕಾರಣದ ‘ಹಿಂಸೆ’ ಮತ್ತು ‘ಭಯೋತ್ಪಾದನೆ’ಯಂತಹ ಕೃತ್ಯಗಳನ್ನು ಅವರು ಸಹಿಸಿಕೊಳ್ಳುತ್ತಿರಲಿಲ್ಲ. ಆದರೆ ಠಾಕೂರರ ಈ ಮನೋಭಾವವು ಬ್ರಿಟಿಷರ ವಸಾಹತುಶಾಹಿ ನೀತಿಯನ್ನು ವಿರೋಧಿಸದಂತೆ ಅವರನ್ನು ತಡೆಯಲಿಲ್ಲ. ಜಲಿಯನ್ ವಾಲಾಬಾಗ್ ಹತ್ಯಾಕಂಡದ ಸಂದರ್ಭದಲ್ಲಿ ಅವರು ಬ್ರಿಟಿಷ್ ಸರ್ಕಾರವು ತಮಗೆ ನೀಡಿದ್ದ ‘ನೈಟ್‌ಹುಡ್’ ಪದವಿಯನ್ನು ಮರಳಿಸಿದರು, ಬಂಗಾಳ ವಿಭಜನೆ ವಿರೋಧಿ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅಲ್ಲದೆ ಸೆರೆಮನೆಗಳಲ್ಲಿ ಖೈದಿಗಳ ಮೇಲೆ ಹಾಗೂ ಹೊರಗಡೆ ಸಾರ್ವಜನಿಕರ ಮೇಲಿನ ಬ್ರಿಟಿಷರ ದೌರ್ಜನ್ಯಗಳನ್ನು ತತ್‌ಕ್ಷಣವೇ ಖಂಡಿಸುತ್ತಿದ್ದರು. ಆದರೆ ಈ ಕಾರಣಕ್ಕಾಗಿ ಸಶಸ್ತ್ರ ಬಂಡಾಯವನ್ನು ಅವರು ಪ್ರೋತ್ಸಾಹಿಸಲಿಲ್ಲ. ಪ್ರಾಯಶಃ ಈ ಕಾರಣದಿಂದಲೇ ಅವರು ಆಗಿನ ಸ್ವಾತಂತ್ರ್ಯ ಚಳವಳಿಯ ಯಾವ ಪಂಥದವರೊಡನೆಯೂ ನಿಕಟವಾಗಿ ಗುರುತಿಸಿಕೊಳ್ಳದೆ ಪ್ರತ್ಯೇಕ ‘ರಾಷ್ಟ್ರೀಯತಾವಾದ’ವನ್ನು ಮಂಡಿಸಿದರು. ಅವರ ಸಾಹಿತ್ಯದಲ್ಲೂ ಈ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲೂ ಕಾದಂಬರಿಗಳಲ್ಲಿ ವಿಸ್ತೃತವಾಗಿ ಈ ವಿಚಾರಗಳನ್ನು ಅವರು ಚರ್ಚಿಸಿದ್ದಾರೆ.

ನೋಬೆಲ್ ಪ್ರಶಸ್ತಿ ಪಡೆದ ಮೊದಲ ಯುರೋಪಿಯನ್ನೇತರ ವ್ಯಕ್ತಿಯಾದ ರವೀಂದ್ರನಾಥ ಠಾಕೂರರ ರಾಷ್ಟ್ರೀಯತೆ ಹಾಗೂ ಸಮಕಾಲೀನ ರಾಜಕೀಯ ಕುರಿತ ವಿಚಾರಗಳು ಸಂಕೀರ್ಣತೆಯಿಂದ ಕೂಡಿವೆ. ಬೆಂಗಾಲಿ ಸುಸಂಸ್ಕೃತ, ಶ್ರೀಮಂತ ಮನೆತನದಲ್ಲಿ ಜನಿಸಿದ ರವೀಂದ್ರರು, ವಸಾಹತುಶಾಹಿ ಸಂದರ್ಭದ ಸಾಂಸ್ಕೃತಿಕ ಹಾಗೂ ರಾಜಕೀಯ ಉದ್ರೇಕಿತ ಘಟನೆಗಳನ್ನು ತುಂಬಾ ಹತ್ತಿರದಿಂದ ಕಂಡವರು. ಬಹುಮುಖ ಪ್ರತಿಭೆಯ ಠಾಕೂರರು ತಮ್ಮ ಕವಿತೆ, ಕಥೆ, ಕಾದಂಬರಿ, ನಾಟಕ, ಹಾಡುಗಳು ಹಾಗೂ ಚಿತ್ರಕಲೆಯ ಮೂಲಕ ಆ ಕಾಲದ ತಲ್ಲಣಗಳಿಗೆ ತಮ್ಮ ಮನದ ತುಡಿತಗಳನ್ನು ಅಭಿವ್ಯಕ್ತಿಸಿದ್ದಾರೆ. ಅವರ ಬಹುತೇಕ ಬರಹಗಳು ರಾಷ್ಟ್ರ, ರಾಷ್ಟ್ರೀಯತೆ ಹಾಗೂ ರಾಷ್ಟ್ರೀಯವಾದ ಮುಂತಾದ ವಿಚಾರಗಳ ಕುರಿತು ಚರ್ಚಿಸುತ್ತವೆ. ವಸಾಹತು ವಿರೋಧಿ ಕಾಲದ ಆರಂಭದಲ್ಲಿ ರಚಿತವಾದ ಅವರ ‘ಗೋರಾ’(‘ಬಿಳಿ ಬಣ್ಣದವ’ ಎಂಬರ್ಥ. ೧೯೧೦) ಕಾದಂಬರಿಯು, ‘ಗೋರಾ’ ಎಂಬ ಬ್ರಿಟಿಷ್ ವ್ಯಕ್ತಿಯ ಮೂಲಕ ರಾಷ್ಟ್ರೀಯತೆಯನ್ನು ಕುರಿತ ವಿಚಾರಗಳನ್ನು ಪರಾಮರ್ಶೆಗೆ ಒಳಪಡಿಸುತ್ತದೆ. ತಂದೆ–ತಾಯಿಯರನ್ನು ಕಳೆದುಕೊಂಡು, ಅನಾಥ ಶಿಶುವಾಗಿ, ಹಿಂದು ಕುಟುಂಬವೊಂದರಲ್ಲಿ ಬೆಳೆದ ಗೋರಾ, ಕೊನೆಯಲ್ಲಿ ತನ್ನ ಮೂಲದ ಬಗ್ಗೆ(ರಾಷ್ಟ್ರೀಯತೆ) ಅರಿತುಕೊಳ್ಳುತ್ತಾನೆ. ಠಾಕೂರರು ತಮ್ಮ ಕೃತಿಗಳಲ್ಲಿ ಮಾತ್ರವಲ್ಲದೆ, ನಿಜಜೀವನದಲ್ಲಿಯೂ ರಾಷ್ಟ್ರೀಯತೆಯ ಕುರಿತು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ನಿಸ್ಸಂದೇಹಾಸ್ಪದವಾಗಿ ಅವರು ಒಬ್ಬ ಅಪ್ಪಟ ದೇಶಪ್ರೇಮಿಯಾಗಿದ್ದರು. ಆದರೆ ಅವರ ‘ಸ್ವಾತಂತ್ರ್ಯ’ದ ಕಲ್ಪನೆಯು, ಕೇವಲ ಬ್ರಿಟಿಷರಿಂದ ರಾಜಕೀಯ ಬಿಡುಗಡೆ ಮಾತ್ರವಾಗಿರಲಿಲ್ಲ. ಹಿಂಸಾತ್ಮಕ ಚಟುವಟಿಕೆಗಳ ದುಷ್ಪರಿಣಾಮಗಳ ಕುರಿತು ದೇಶವಾಸಿಗಳನ್ನು ಗಂಭೀರವಾಗಿ ಎಚ್ಚರಿಸುತ್ತಿದ್ದರು. ಸ್ವದೇಶಿ ಚಳವಳಿ ಮತ್ತು ಕ್ರಾಂತಿಕಾರಿ ರಾಷ್ಟ್ರೀಯತೆಯನ್ನು ಅವರು ವಿರೋಧಿಸುತ್ತಿದ್ದರು.

೧೯೦೫ರಲ್ಲಿ ಬಂಗಾಳ ವಿಭಜನೆಯೊಂದಿಗೆ ಆರಂಭವಾದ ಸ್ವದೇಶಿ ಚಳವಳಿಯು, ಭಾರತದಲ್ಲಿ ಬ್ರಿಟಿಷರ ಆರ್ಥಿಕ ಶಕ್ತಿಯನ್ನು ಕುಂದಿಸುವ ಉದ್ದೇಶದಿಂದ ೧೯೦೮ರವರೆಗೆ ಮುಂದುವರೆಯಿತು. ಬ್ರಿಟಿಷರ ಕುತಂತ್ರದಿಂದಾಗಿ ಬಂಗಾಳದಲ್ಲಿ ಭಾರತೀಯರ ಉತ್ಪನ್ನಗಳು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದ್ದವು. ಇದಕ್ಕೆ ಪ್ರತಿಯಾಗಿ ಸ್ವದೇಶಿ ಚಳವಳಿಯಲ್ಲಿ ವಿದೇಶಿ ಉತ್ಪನ್ನಗಳನ್ನು ನಿರಾಕರಿಸಿ, ಸ್ಥಳೀಯ ಉತ್ಪನ್ನಗಳನ್ನು ಬಳಸಲು ತೊಡಗಿದರು. ಇದು ಬ್ರಿಟಿಷರ ವಿರುದ್ಧ ಪರಿಣಾಮಕಾರಿ ಪ್ರತಿರೋಧವಾಗಿ ಕಂಡುಬಂದಿತು. ಆದರೂ ಸಣ್ಣ ವ್ಯಾಪಾರಸ್ಥರು, ವಿಶೇಷವಾಗಿ ಬಡ ಮುಸ್ಲಿಂ ವ್ಯಾಪಾರಿಗಳು ಈ ಚಳವಳಿಯ ಕಾರಣದಿಂದ ತಮ್ಮ ಉದ್ಯೋಗದಲ್ಲಿ ಅಪಾರ ನಷ್ಟವನ್ನು ಅನುಭವಿಸುವಂತಾಯಿತು. ರವೀಂದ್ರನಾಥ ಠಾಕೂರರ 'ಮನೆ ಮತ್ತು ಜಗತ್ತು' (ಘರೇ ಭೈರೇ, ೧೯೧೬) ಕಾದಂಬರಿಯು "ಬ್ರಿಟಿಷರ ಉತ್ಪನ್ನಗಳನ್ನು ಮಾರಿ ಜೀವನ ಸಾಗಿಸುತ್ತಿದ್ದ ಬಡ ಮುಸ್ಲಿಂ ವ್ಯಾಪಾರಿಗಳ ಬದುಕು, 'ಸ್ವದೇಶಿ ಚಳವಳಿ' ಎಂಬ ಏಕಮುಖಿ ಹಿಂಸಾತ್ಮಕ ಹೋರಾಟದ ಪರಿಣಾಮದಿಂದ ಹೇಗೆ ಬೀದಿಗೆ ಬಂದಿತು" ಎಂಬುದನ್ನು ಕಟುವಾಗಿ ಚಿತ್ರಿಸುತ್ತದೆ. ಸ್ವದೇಶಿ ಚಳವಳಿಗಾರರು, ಮುಸ್ಲಿಂ ವ್ಯಾಪಾರಿಗಳು ತಮ್ಮ ಉಪಜೀವನಕ್ಕಾಗಿ ಮಾರಾಟ ಮಾಡುತ್ತಿದ್ದ ಬ್ರಿಟಿಷ್ ಉತ್ಪನ್ನಗಳನ್ನು ಬೀದಿಯಲ್ಲಿ ಸುರಿದು, ಬೆಂಕಿ ಹಚ್ಚಿ ಸುಡುವಂತೆ ಹಿಂಸಿಸುತ್ತಿದ್ದರು. ಕಾದಂಬರಿಯ ಪ್ರಮುಖ ಪಾತ್ರವಾದ ನಿಖಿಲನು ಠಾಕೂರರ ಮುಖವಾಣಿಯಂತೆ ಬಿಂಬಿತವಾಗಿದ್ದಾನೆ. ಸುಸಂಸ್ಕೃತ, ಆಗರ್ಭ ಶ್ರೀಮಂತ ಜಮೀನ್ದಾರನಾಗಿರುವ ನಿಖಿಲನು ತನ್ನ ಎಸ್ಟೇಟ್‌ನಲ್ಲಿ ವಾಸವಾಗಿರುವ ಬಡ ವ್ಯಾಪಾರಿಗಳ ಮೇಲೆ ಸ್ವದೇಶಿ ಚಳವಳಿ ಕಾರಣದ ಹಿಂಸೆಯನ್ನು ವಿರೋಧಿಸುತ್ತಾನೆ. ಆದ್ದರಿಂದ ಅವನು 'ದೇಶಪ್ರೇಮವಿಲ್ಲದವನು' ಮತ್ತು 'ಹಿಂಜರಿಕೆ ಸ್ವಭಾವದವನು' ('ಬ್ರಿಟಿಷರನ್ನು ಎದುರಿಸಲಾಗದ ಹೇಡಿ' ಎಂಬರ್ಥದಲ್ಲಿ) ಎಂಬ ದೂಷಣೆಗೆ ಒಳಗಾಗುತ್ತಾನೆ.

ವಿದೇಶಿ ವಸ್ತುಗಳ ನಿರಾಕರಣೆಯು ವಸಾಹತು ವಿರೋಧಿ ನೀತಿಯ ಸಣ್ಣ ಅಂಶವಾದರೂ ಬ್ರಿಟಿಷರಿಗೆ ಅತಿಯಾದ ಕಿರಿಕಿರಿಯನ್ನು ಉಂಟುಮಾಡಿತು. ಅಲ್ಲದೆ ಕ್ರಾಂತಿಕಾರಿ ರಾಷ್ಟ್ರೀಯತೆಗೂ ಕಾರಣವಾಯಿತು. ಇದರ ಮುಂದುವರಿಕೆಯಾಗಿ ೧೮ ವರ್ಷದ ಖುದಿರಾಮ್ ಭೋಸ್ ಅವರು, ಬಿಹಾರದ ಮುಜಾಫರ್‌ಪುರದ ಮ್ಯಾಜಿಸ್ಟ್ರೇಟ್‌ರನ್ನು ಕೊಲ್ಲವ ಪ್ರಯತ್ನದಲ್ಲಿ ಆಕಸ್ಮಿಕವಾಗಿ ಒಬ್ಬ ಮಹಿಳೆ ಮತ್ತು ಮಗುವನ್ನು ಕೊಲ್ಲುತ್ತಾರೆ. ಆಗ ರವೀಂದ್ರರು ರಾಷ್ಟ್ರೀಯ ಚಳವಳಿಯಿಂದ ಹಿಂದೆ ಸರಿಯುತ್ತಾರೆ. ಅಲ್ಲದೆ, ತಮ್ಮ 'ಮನೆ ಮತ್ತು ಜಗತ್ತು' ಕಾದಂಬರಿಯಲ್ಲಿ ಸಂದೀಪನ ಪಾತ್ರದ ಹಿಂಸಾತ್ಮಕ ಕೃತ್ಯಗಳು ಮತ್ತು ಅತಾರ್ಕಿಕ ನಡೆಗಳನ್ನು ಚಿತ್ರಿಸುವ ಮೂಲಕ, ರಾಷ್ಟ್ರೀಯ ಚಳವಳಿಯ ಹಿಂಸಾತ್ಮಕ ಮುಖದ ವಿಫಲತೆ ಹಾಗೂ ದಾರುಣತೆಗಳನ್ನು ವಿಮರ್ಶಿಸುತ್ತಾರೆ. ಕಾದಂಬರಿಯಲ್ಲಿ ಸಂದೀಪನು ಆಕರ್ಷಕ ವ್ಯಕ್ತಿಯಾಗಿದ್ದು, ತನ್ನ ಅತ್ಯದ್ಭುತ ವಾಕ್ಚಾತುರ್ಯದಿಂದಾಗಿ ಬೃಹತ್ ರ್‍ಯಾಲಿಗಳನ್ನು ನಡೆಸುವ, ಜನಸಮುದಾಯವನ್ನು ನಿಯಂತ್ರಿಸುವ ಚತುರನಾಗಿರುತ್ತಾನೆ. ನಿಖಿಲನ ಮಡದಿ ವಿಮಲಾಳೂ ಸೇರಿದಂತೆ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸುವ ಪ್ರಖರ ವಾಗ್ಮಿಯಾಗಿರುತ್ತಾನೆ. ಆದರೆ ತನ್ನ ವೈಯಕ್ತಿಕ ಜೀವನದಲ್ಲಿ ಸಂಕುಚಿತ ಸ್ವಭಾವದ ಮತ್ತು ಸ್ವಾರ್ಥಿಯಾಗಿರುತ್ತಾನೆ. ವಿಮಲಾಳೊಂದಿಗಿನ ಇವನ ಸಂಬಂಧವನ್ನು ಠಾಕೂರರು ವಿಮರ್ಶಾತ್ಮಕವಾಗಿ ನಿರೂಪಿಸುತ್ತಾರೆ. ಸುಧಾರಣಾವಾದಿಯಾಗಿರುವ ನಿಖಿಲನು ತನ್ನ ಅಂತಸ್ತನ್ನು ಮರೆತು ವಿಮಲಾಳನ್ನು ವಿವಾಹವಾಗುತ್ತಾನೆ. ಅವಳನ್ನು ಆಧುನಿಕಳನ್ನಾಗಿಸಲು ಪ್ರಯತ್ನಿಸುತ್ತಾನೆ. ಅವಳಿಗೆ ಓದುವಂತೆ ಪ್ರೇರೇಪಿಸುತ್ತಾನೆ. ತನ್ನ ಎಲ್ಲಾ ಸ್ನೇಹಿತರಿಗೂ ಅವಳನ್ನು ಪರಿಚಯಿಸುತ್ತಾನೆ. ಆದರೆ ನಿಖಿಲನ ಯಾವ ಪ್ರಯತ್ನಗಳಿಗೂ ಸ್ಪಂದಿಸದ ವಿಮಲಾಳು, ಸಂಪ್ರದಾಯದ ಪರದೆಯೊಳಗೇ ಉಳಿಯುತ್ತಾಳೆ. ಆದರೆ ಸಂದೀಪನ ಪರಿಚಯವಾದ ತಕ್ಷಣ ಅಚ್ಚರಿದಾಯಕವಾಗಿ ಬದಲಾಗುತ್ತಾಳೆ. ಅದುವರೆಗೆ ಸಂಪ್ರದಾಯಸ್ಥ ಗೃಹಿಣಿಯಾಗಿದ್ದ 'ವಿಮಲಾ'ಳು, ಸಂದೀಪನ ಚೇತೋಹಾರಿಯಾದ ಹಾಗೂ ಉದ್ರೇಕಕಾರಿಯಾದ ಭಾಷಣವನ್ನು ಕೇಳಿದ ನಂತರ ಸಂಪೂರ್ಣ ಬದಲಾಗಿ ಬಿಡುತ್ತಾಳೆ. ಎಷ್ಟೆಂದರೆ, ಸಂದೀಪನಿಗೋಸ್ಕರ ತನ್ನ ಪತಿ ನಿಖಿಲನಿಗೆ ಮೋಸ ಮಾಡಲೂ ಹಿಂಜರಿಯುವುದಿಲ್ಲ.

ಸಂದೀಪನು ಭಾರತ ಮಾತೆಯನ್ನು ಕ್ರಿಶ್ಚಿಯನ್ನಳನ್ನಾಗಿಸುತ್ತಾನೆ, ಮತ್ತು ವಿಮಲಾಳನ್ನು ಹಿಂದೂ ದೇವತೆಯಂತೆ ಪೂಜೆ ಮಾಡುತ್ತಾನೆ. ಭಾರತದ ಸ್ವಾತಂತ್ರ್ಯದ ಸಂಕೇತವಾಗಿ ಈ ಚಟುವಟಿಕೆಯು ಕಾದಂಬರಿಯುದ್ದಕ್ಕೂ ನಡೆಯುತ್ತದೆ. ಸಂದೀಪನು ಈ ತಂತ್ರದ ಮೂಲಕ ಭಾರತೀಯ ಪ್ರತಿಮಾರಾಧನೆಯ ಸಂಪ್ರದಾಯವನ್ನು ಸ್ವಾತಂತ್ರ್ಯ ಹೋರಾಟದ ರಾಜಕೀಯ ಕಾರಣಕ್ಕೆ ಬಳಸಿಕೊಳ್ಳುತ್ತಾನೆ. ಇದರಿಂದ ರಾಷ್ಟ್ರೀಯ ಚಳವಳಿಗೆ ಮತೀಯ ಆಯಾಮ ದೊರೆಯುತ್ತದೆ. 'ಮಾತೃ ಪೂಜಾ' ಪರಿಕಲ್ಪನೆಯು ಕಾದಂಬರಿಯಲ್ಲಿ ಹೊಸ ಕಾಳಜಿಯನ್ನು ಉಂಟುಮಾಡುತ್ತದೆ. ಅಲ್ಲದೆ ಸಂದೀಪನು ತನ್ನ ವಾಕ್ಚತುರತೆಯನ್ನು ವಿಮಲಾಳಲ್ಲಿ ಕಾಮಪ್ರಚೋದಕವನ್ನಾಗಿ ಬಳಸಿಕೊಳ್ಳುತ್ತಾನೆ. ಸಂದೀಪನು ರಾಷ್ಟ್ರೀಯ ಹೋರಾಟದ ಸೋಗಿನಲ್ಲಿ, ಅವಳನ್ನು ಕಾಮದ ವಸ್ತುವನ್ನಾಗಿ ಹಾಗೂ ತನಗೆ ಬೇಕಾದಾಗ ಹಣ ಒದಗಿಸುವ ಖಜಾನೆಯನ್ನಾಗಿ ಬಳಸಿಕೊಳ್ಳುತ್ತಾನೆ. ಆದರೆ ವಿಮಲಾಳು ಸಂದೀಪನ ಈ ಕುತಂತ್ರವನ್ನು ಗುರುತಿಸಲು ವಿಫಲಳಾಗುತ್ತಾಳೆ. ಕೊನೆಯಲ್ಲಿ ತುಂಬಾ ತಡವಾಗಿ, 'ಅಮೂಲ್ಯ'(ಹೆಸರಿಗೆ ತಕ್ಕಂತಹ !) ಎಂಬ ಬಾಲಕನೊಂದಿಗೆ ಹೊಸ ಸಂಬಂಧ(ತಾಯಿ–ಮಗು) ಅಂಕುರಿಸಿದ ಮೇಲೆ ಸಂದೀಪನ ಮೋಸಗೊಳಿಸುವ ಪರಿಯ ಅರಿವಾಗುತ್ತದೆ.

ಇನ್ನೊಂದು ಕಡೆ ನಿಖಿಲನ ಸೂಕ್ಷ್ಮ ರಾಜಕೀಯ ನಡೆಗಳಿಂದ ವಿಮಲಾಳು ಸಂದೀಪನ ಕುರಿತ ಸತ್ಯವನ್ನು ಮನಗಾಣುತ್ತಾಳೆ. ಸ್ವಾರ್ಥದ ಬದಲು ನಿಸ್ವಾರ್ಥದ ನಡೆಯನ್ನು ನಿಖಿಲನ ಪಾತ್ರವು ನಿರೂಪಿಸುತ್ತದೆ. ಕೇವಲ ಬ್ರಿಟಿಷರ ಎಲ್ಲ ನೀತಿಗಳನ್ನೂ ವಿರೋಧಿಸುವ ವಸಾಹತು ವಿರೋಧಿ ನೀತಿಯನ್ನು ನೀಖಿಲನು ಖಂಡಿಸುತ್ತಾನೆ. ಅಲ್ಲದೆ, "ಪಾಶ್ಚಾತ್ಯ ಸಂಸ್ಕೃತಿಯ ಎಲ್ಲ ಉತ್ತಮಾಂಶಗಳನ್ನು ಅಳವಡಿಸಿಕೊಂಡ ಸಾಮರಸ್ಯದ ಸಮಾಜವನ್ನು ನಿರ್ಮಿಸುವುದು" ಅವನ ಗುರಿಯಾಗಿರುತ್ತದೆ. ರವೀಂದ್ರರು ತಮ್ಮ ಭಾಷಣಗಳು ಹಾಗೂ ಇತರ ಲೇಖನಗಳಲ್ಲಿ ಪ್ರತಿಪಾದಿಸುವ ವಿಚಾರಗಳನ್ನು ನಿಖಿಲನು ಕಾದಂಬರಿಯಲ್ಲಿ ಒಂದು ಪ್ರಮುಖ ಪಾತ್ರವಾಗಿ ನಿರೂಪಿಸುತ್ತಾನೆ. ಠಾಕೂರರು ತಮ್ಮ 'ರಾಷ್ಟ್ರೀಯತೆ' ಎಂಬ ಕೃತಿಯಲ್ಲಿ "ಸ್ವಾತಂತ್ರ್ಯವೆಂಬುದು ಕೇವಲ ಬ್ರಿಟಿಷರಿಂದ ರಾಜಕೀಯ ವಿಮುಕ್ತಿಯನ್ನು ಪಡೆಯುವುದು ಮಾತ್ರವಲ್ಲ. ಬದಲಿಗೆ, ಒಬ್ಬ ವ್ಯಕ್ತಿಯು ಪ್ರಾಮಾಣಿಕನಾಗಲು ಮತ್ತು ತನ್ನಷ್ಟಕ್ಕೆ ತಾನು ಸತ್ಯಸಂಧನಾಗಲು ಅರ್ಹತೆಯನ್ನು ಗಳಿಸಿಕೊಳ್ಳುವುದಾಗಿದೆ" ಎಂದು ಪ್ರತಿಪಾದಿಸುತ್ತಾರೆ. ರವೀಂದ್ರರ ಈ ವಿಚಾರಗಳೇ ಮುಂದೆ ಭಾರತದ ರಾಷ್ಟ್ರೀಯತೆಯ ನೇತಾರರಾಗಿ ಬೆಳೆದ ಮಹಾತ್ಮ ಗಾಂಧೀಜಿಯವರ ಹೋರಾಟ, ಜೀವನ ಹಾಗೂ ಸಂದೇಶದ ಸಿದ್ಧಾಂತಗಳೇ ಆದವು.

ತಾರ್ಕಿಕ ವಿವೇಚನೆಯಿಲ್ಲದ ರಾಷ್ಟ್ರೀಯ ಚಳವಳಿಯ ಹೆಸರಿನ ರ್‍ಯಾಲಿಗಳು, ಹಿಂಸೆಗಳು ಮತ್ತು ಘೋಷಣೆಗಳ ಹಿಂಸಾತ್ಮಕ ರಾಷ್ಟ್ರೀಯತೆಯನ್ನು ಖಂಡಿಸುವುದನ್ನು ಠಾಕೂರರು 'ನಾಲ್ಕು ಅಧ್ಯಾಯಗಳು" (ಚಾರ್ ಅಧ್ಯಾಯ–ಚತುರಂಗ, ೧೯೩೪) ಎಂಬ ಕಾದಂಬರಿಯಲ್ಲಿಯೂ ಮುಂದುವರೆಸುತ್ತಾರೆ. ಠಾಕೂರರು ತಮ್ಮ ಮೊದಲ ಕಾದಂಬರಿ 'ಘರೆ ಭೈರೆ' (ಮನೆ ಮತ್ತು ಜಗತ್ತು)

ಕಾದಂಬರಿಯಲ್ಲಿ ಭಯೋತ್ಪಾದನೆಯಂತಹ ಕ್ರಾಂತಿಕಾರಿ, ಹಿಂಸಾತ್ಮಕ ಕೃತ್ಯಗಳ ವಿರುದ್ಧ ದೇಶವಾಸಿಗಳನ್ನು ಎಚ್ಚರಿಸುತ್ತಾರೆ. ಆದರೆ ಸ್ವಾತಂತ್ರ್ಯವನ್ನು ಗಳಿಸುವ ಮಾಧ್ಯಮವಾಗಿ ಬಳಕೆಯಾಗುತ್ತಿದ್ದ ಹಿಂಸೆಯ ಮಾರ್ಗವನ್ನು 'ನಾಲ್ಕು ಅಧ್ಯಾಯಗಳು' ಕಾದಂಬರಿಯಲ್ಲಿ ನೇರವಾಗಿ ಖಂಡಿಸುತ್ತಾರೆ. 'ಜನರನ್ನು ಉದ್ರೇಕಗೊಳಿಸುತ್ತದೆ' ಎಂಬ ಕಾರಣವನ್ನು ನೀಡಿ ರವೀಂದ್ರನಾಥರ ಸಮಕಾಲೀನರಾದ ಶರತ್‌ಚಂದ್ರ ಚಟ್ಟೋಪಾಧ್ಯಾಯ ಅವರ 'ಪಥರ್ ಡಬಿ'(ಆಜಟಚಿಟಿಜ ಜಿಠಡಿ ತಿಚಿಥಿ–ಮಾರ್ಗಕ್ಕಾಗಿ ಹಕ್ಕೊತ್ತಾಯ) ಎಂಬ ಕಾದಂಬರಿಯನ್ನು ಬ್ರಿಟಿಷ್ ಸರ್ಕಾರವು ನಿಷೇಧಿಸಿತ್ತು. ಆದರೆ, 'ಪಥರ್ ಡಬಿ'ಯ ೧೦ ವರ್ಷಗಳ ನಂತರ ಪ್ರಕಟವಾದ 'ನಾಲ್ಕು ಅಧ್ಯಾಯಗಳು' ಕಾದಂಬರಿಯನ್ನು ಬ್ರಿಟಿಷ್ ಬಂಗಾಳ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಎಸ್.ಎನ್.ದಾಸ್ ಅವರು "ಈ ಪುಸ್ತಕವು (ನಾಲ್ಕು ಅಧ್ಯಾಯಗಳು)... ನಮ್ಮ ಗುರಿ ಈಡೇರಿಕೆಗೆ ಬಳಕೆಯಾಗುತ್ತದೆ" ಎಂದು ಮುಕ್ತ ಮನಸ್ಸಿನಿಂದ ಉದ್ಧರಿಸುತ್ತಾರೆ. ಕಾರಣ ಈ ಕಾದಂಬರಿಯು ಸರ್ಕಾರದ ವಿರುದ್ಧದ ಹಿಂಸಾ ಕೃತ್ಯಗಳನ್ನು ವಿರೋಧಿಸಿತು.

ರವೀಂದ್ರನಾಥ ಠಾಕೂರರ ಹಲವು ಕವಿತೆ, ಹಾಡುಗಳು ಬ್ರಿಟಿಷರ ವಿರುದ್ಧ ಸಾಂಘಿಕ, ಸಶಸ್ತ್ರ ಹೋರಾಟಕ್ಕೆ ಜನರನ್ನು ಉತ್ತೇಜಿಸುತ್ತಿದ್ದವು. ಆದರೆ 'ನಾಲ್ಕು ಅಧ್ಯಾಯಗಳು' ಎಂಬ ಅವರ ಕಾದಂಬರಿಯನ್ನು 'ಬ್ರಿಟಿಷರು ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕಲು ಬಳಸಿಕೊಳ್ಳುತ್ತಿದ್ದರು' ಎಂಬ ಅಂಶವನ್ನು ಠಾಕೂರರ ಕುರಿತು ಮಹತ್ವದ ಸಂಶೋಧಕರಲ್ಲಿ ಒಬ್ಬರಾದ ಶಿಶಿರ್ ಕರ್(ಖುಡಿ ಇಚಿಡಿ) ಅವರು ಪ್ರತಿಪಾದಿಸುತ್ತಾರೆ. ೧೯೩೦ರ ದಶಕದಲ್ಲಿ ಬಂಗಾಳ ಸರ್ಕಾರವು ಸ್ವಾತಂತ್ರ್ಯ ಹೋರಾಟಗಾರರ ಹಿಂಸಾತ್ಮಕ ಮಾರ್ಗವನ್ನು ತಣ್ಣಗಾಗಿಸಲು 'ಚಾರ್ ಅಧ್ಯಾಯ್' ಎಂಬ ಠಾಕೂರರ ಕಾದಂಬರಿಯನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಾರೆ. ಈ ಕಾದಂಬರಿಯು ಪ್ರಭುತ್ವದ ವಿರುದ್ಧದ ಹಿಂಸಾತ್ಮಕ ಪ್ರತಿಭಟನೆಯನ್ನು ವಿರೋಧಿಸುತ್ತದೆ. ಆದ್ದರಿಂದ ಬ್ರಿಟಿಷ್ ಸರ್ಕಾರವು ಬಂಗಾಳದ ಎಲ್ಲ ಗ್ರಂಥಾಲಯಗಳಿಗೆ ಈ ಕಾದಂಬರಿಯನ್ನು ಸರಬರಾಜು ಮಾಡಿ, ಠಾಕೂರರ ಅಭಿಮಾನಿಗಳು ಇದನ್ನು ಓದಿ ತಮ್ಮ ಹಿಂಸಾ ಮಾರ್ಗವನ್ನು ತ್ಯಜಿಸುವಂತೆ ಮಾಡಿತು. ಅಲ್ಲದೆ ಈ ಕಾದಂಬರಿಯ ನಾಟಕ ರೂಪದ ಪ್ರದರ್ಶನವನ್ನೂ ಏರ್ಪಡಿಸಿತು.

'ನಾಲ್ಕು ಅಧ್ಯಾಯಗಳು' ಕಾದಂಬರಿಯು 'ನಿಜವಾದ ದೇಶಭಕ್ತ ಎಂದರೆ ಯಾರು, ಕಾವ್ಯಾತ್ಮಕ ಘೋಷಣೆಗಳನ್ನು ಕೂಗುವುದರಿಂದ ಸ್ವಾತಂತ್ರ್ಯ ಗಳಿಸುವುದು ಸಾಧ್ಯವೇ, ಒಂದು ರಾಷ್ಟ್ರ ನಿರ್ಮಾಣದಲ್ಲಿ ವ್ಯಕ್ತಿಯು ಹೇಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು' ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತದೆ. 'ಯುವ ಜೋಡಿಯೊಂದು ತಮ್ಮ ಪ್ರೇಮ–ದಾಂಪತ್ಯ ಜೀವನ ಹಾಗೂ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವ ವಿಚಾರಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳುವುದು' ಎಂಬ ಗೊಂದಲ ಈ ಕಾದಂಬರಿಯ ಪ್ರಮುಖ ವಿಷಯವಾಗಿದೆ. ಕಾದಂಬರಿಯ ಪ್ರಮುಖ ಪಾತ್ರವಾದ 'ಇಳಾ' ಮಾತ್ರ ಈ ಗೊಂದಲದಿಂದ ಹೊರಬಂದು ದೇಶ ಸೇವೆಗಾಗಿ ವೈಯಕ್ತಿಕ ಜೀವನದ ಸುಖ–ಸಂತೋಷಗಳನ್ನು ತ್ಯಜಿಸಲು ತೀರ್ಮಾನಿಸುತ್ತಾಳೆ. ಆದರೆ ಅವಳ ಪ್ರಿಯಕರ(ಅತೀಂದ್ರ)ನಿಂದ ಸಕಾರತ್ಮಕ ಸ್ಪಂದನೆ ದೊರೆಯುವುದಿಲ್ಲ.

'ಚೋಖರ್ ಬಲಿ ಅಥವಾ ವಿನೋದಿನಿ' ಎಂಬ ಕಾದಂಬರಿಯು, ಪಾಶ್ಚ್ಯಾತ್ಯ ಪ್ರಭಾವದಿಂದ ಸ್ವತಂತ್ರ ವಿಚಾರ ಪ್ರವೃತ್ತರಾದ ತರುಣ ಪೀಳಿಗೆಯ ಜಗತ್ತನ್ನು ಅನಾವರಣಗೊಳಿಸುತ್ತದೆ. 'ವಿನೋದಿನಿ'ಯು ಬಂಗಾಳದ ಕಾದಂಬರಿಯ (ಪ್ರಾಯಶಃ ಭಾರತೀಯ) ಮೊಟ್ಟ ಮೊದಲ ಆಧುನಿಕ ಯುವತಿಯಾಗಿದ್ದಾಳೆ. ಈ ಕಾದಂಬರಿಯಲ್ಲಿ ರವೀಂದ್ರರು ಮನಸ್ಸಿನ ವ್ಯಾಪಾರದತ್ತ ಬೆಳಕು ಹರಿಸಿದ್ದಾರೆ. ಕಥಾವಸ್ತು ಹಾಗೂ ಘಟನೆಗಳಿಗಿದ್ದ ಪಾಧಾನ್ಯತೆಯು ಇಲ್ಲವಾಗಿ, ಅಂತರಂಗದ ಜಗತ್ತಿಗೆ ಇಲ್ಲಿ ಪ್ರಾಧ್ಯಾನ್ಯತೆ ದೊರೆಯಿತು. ಪಾತ್ರ–ಸನ್ನಿವೇಶಗಳ ಪ್ರತಿಕ್ರಿಯೆಗಳಿಂದ ಕ್ರಿಯೆ ಮುಂದುವರೆಯುವ ಮೊದಲ ಕಾದಂಬರಿ ಇದು.

ರಾಧಾ ಚಕ್ರವರ್ತಿಯವರ ಪ್ರಕಾರ 'ಠಾಕೂರರು ಸಂಪ್ರದಾಯ ಮತ್ತು ಆಧುನಿಕತೆಯ, ಹಿಂದೂ ಸಂಪ್ರದಾಯವಾದಿ ಮತ್ತು ಬ್ರಿಟಿಷ್ ಉದಾರೀಕರಣ ಶಕ್ತಿಗಳ ಒಂದು ವಿರೋಧಾತ್ಮಕ ಸಾಮಾಜಿಕ ಪರಿಸರದಿಂದ ಕೂಡಿದ ಅವಧಿಯಲ್ಲಿ ಈ ಕಾದಂಬರಿಯನ್ನು ರಚಿಸಿದರು'. 'ಆಧುನಿಕತೆಯು ಪಾರಂಪರಿಕ ಸಮಾಜದ ನಡವಳಿಕೆಗಳು ಮತ್ತು ರೂಢಿಗಳನ್ನು ಹೇಗೆ ನಿಗ್ರಹಿಸುತ್ತದೆ' ಎಂಬುದನ್ನು ಈ ಕಾದಂಬರಿಯು ಚಿತ್ರಿಸುತ್ತದೆ.

"What is needed is eagerness of heart for a fruitful communication between different cultures. Anything that prevents this is barbarism" ಎಂಬುದು ರವೀಂದ್ರನಾಥ ಠಾಕೂರರ ರಾಷ್ಟ್ರೀಯತೆಯ ಕುರಿತ ಒಟ್ಟಾರೆ ನಿಲುವಾಗಿತ್ತು. ರು ತಮ್ಮ ಬದುಕು ಹಾಗೂ ಬರಹಗಳ ಮೂಲಕ 'ನಿಜವಾದ ರಾಷ್ಟೀಯತೆ ಎಂಬುದು ಕೇವಲ ದೇಶಪ್ರೇಮವಲ್ಲ'(ಇನ್ನೊಬ್ಬರಿಗೆ ಹಿಂಸೆಯನ್ನುಂಟು ಮಾಡಿ ಅಭಿವ್ಯಕ್ತಿಸುವ) ಎಂಬುದನ್ನು ಅಭಿವ್ಯಕ್ತಿಸಲು ಪ್ರಯತ್ನಿಸುತ್ತಾರೆ. 'ಉದಾತ್ತವಾದ ವಿಚಾರಗಳು ಎಲ್ಲ ಕಡೆಗಳಿಂದಲೂ ಹರಿದು ಬರಲಿ' ಎಂಬ ವೇದಗಳ ಸಾಲಿನಂತೆ, ವ್ಯಕ್ತಿಯು ಭಾರತೀಯತೆಯ 'ಆಧ್ಯಾತ್ಮ' ಎಂಬ ಹಳೆಯ ಬೇರಿಗೆ ಅಂಟಿಕೊಂಡೇ, ಪಾಶ್ಚಾತ್ಯ 'ಆಧುನಿಕತೆ'ಯ ಹೊಸ ಚಿಗುರಿನ ಗುಣ ಪಡೆಯಬೇಕೆಂದು ಪ್ರತಿಪಾದಿಸುತ್ತಾರೆ. ಪೂರ್ವ–ಪಶ್ಚಿಮಗಳ ಸಿದ್ಧಾಂತಗಳ ಸಾಮರಸ್ಯಕ್ಕೆ ರವೀಂದ್ರರು ಆದ್ಯತೆ ನೀಡುತ್ತಾರೆ. ಇದು ಪರಸ್ಪರ ಶಕ್ತಿ–ಸಾಮರ್ಥ್ಯಗಳು ಹಾಗೂ ಸಕಾರಾತ್ಮಕ ಮೌಲ್ಯಗಳ ವಿನಿಮಯದಿಂದ ಸಾಧ್ಯವೆಂಬುದು ಅವರ ಒಟ್ಟು ನಿಲುವು. ವೈಜ್ಞಾನಿಕ ಬೆಳವಣಿಗೆಗಳು, ಶಿಕ್ಷಣ ಪದ್ಧತಿಯಂಥ ಆಧುನಿಕ ವಿಚಾರಗಳನ್ನು ಪೂರ್ವವು ಪಶ್ಚಿಮದಿಂದಲೂ; ಅಧ್ಯಾತ್ಮಿಕ ಸ್ಫೂರ್ತಿ, ಶಾಂತಿ, ನೆಮ್ಮದಿಯುಕ್ತ ಜೀವನಶೈಲಿ ಹಾಗೂ ವಿಧೇಯತೆಯಂಥ ಮೌಲ್ಯಗಳನ್ನು ಪೂರ್ವದಿಂದ ಪಶ್ಚಿಮವು ವಿನಿಮಯ ಮಾಡಿಕೊಂಡು ಸೌಹಾರ್ದಯುತ ಜಗತ್ತು ನಿರ್ಮಾಣವಾಗಬೇಕೆಂಬುದು ಅವರು ಕಾದಂಬರಿಗಳಲ್ಲಿ ಅಭಿವ್ಯಕ್ತಸಿದ ಪ್ರಮುಖ ಸಂದೇಶವಾಗಿದೆ.

**ಆಕರ ಗ್ರಂಥಗಳು**

೧. ನಾಯಕ. ಹಾ.ಮಾ. ರವೀಂದ್ರನಾಥ ಠಾಕೂರ್ : ಗೀತಾಂಜಲಿ ಪುಸ್ತಕ ಪ್ರಕಾಶನ ಶಿವಮೊಗ್ಗ, ೨೦೧೫.
೨. ಮಾಸ್ತಿ ವೆಂಕಟೇಶ ಅಯ್ಯಂಗಾರ : ರವೀಂದ್ರನಾಥ ಠಾಕೂರರು : ಎಂ.ವಿ.ಜೆ.ಕೆ ಟ್ರಸ್ಟ್, ಬೆಂಗಳೂರು, ೨೦೦೪.
3. Raj GV. Tagore – The Novelist : Sterling Publishers Pvt. Ltd, New Delhi, 1983.
4. Manjula R. Novels of Rabindranth Tagore – A Study : S. V. University Tirupati, 2008.
5. Sisir kar. Terrorism and Tagore : Teachers book Agency, Kolkata, 2011.